ಶ್ರೀ ಜೆ.ಎಚ್. ಪಟೀಲ್ : ಇವತ್ತಿನ ಘಟನೆಯಿಂದ ಮಾನ್ಯ ಸದಸ್ಯರ ಮನಸ್ಸಿಗೆ ನೋವಾಗಿದ್ದರೆ ನಾವು ಸದನವನ್ನು ಯಾವುದೇ ರೀತಿಯಿಂದ ಅಗೌರವಸದ್ದೇವೆಂದು ಭಾವಿಸಿದ್ದರೆ ನಾವು ಕ್ಷಮಾಪಣೆ ಕೇಳುತ್ತೇವೆ.

ಅಧ್ಯಕ್ಷರು : ಉಪಮುಖ್ಯಮಂತ್ರಿಗಳು ನಾವೆಲ್ಲರೂ ಮೆಚ್ಚುವಂತಹ ರೀತಿಯಲ್ಲಿ ಮಾತು ಆಡಿದ್ದಾರೆ. ನನಗೆ ಕೇಳಿದರು, ನಿಮ್ಮ ಆತ್ಮ ಒಪ್ಪುತ್ತದೆಯೇ ಎಂದು, ಪ್ರಶ್ನೋತ್ತರ ನಿಮ್ಮ ಅವರ ಮಧ್ಯೆ, ನಮ್ಮ ನಿಮ್ಮ ಮಧ್ಯೆ ಬರುವುದಿಲ್ಲ, ಆದರೆ ಒಂದು ನನ್ನ ಮನಸ್ಸಿಗೂ ವ್ಯಥೆ ಇದೆ, ಹೋದ ಸಲ ಸುಮಾರು 200 ಪ್ರಶ್ನೆಗಳಿಗೆ ಇನ್ನೂ ಉತ್ತರ ಬಂದಿಲ್ಲ. ಈ ಸಂದರ್ಭದಲ್ಲೂ ಅವಧಿ ಕಡಿಮೆ ಮಾಡಿದ್ದೀರಿ ಎಂದು, ನಮ್ಮ ರೂಲ್ಸ್‌ನಲ್ಲಿ ಅವಕಾಶ ಇದೆ ನಾನು ಟೈಂ ಕಡಿಮೆ ಮಾಡಬಹುದು ಕೊಡಬಹುದು, ಡೈರೆಕ್ಷನೂ ಕೊಟ್ಟಿದ್ದೇನೆ ಕೊಡಿ ಅಂತ. ಸದಸ್ಯರ ಅಗ್ರಹ ಇಷ್ಟೆ. ಈ ಸದನದ ಕಾರ್ಯಕಲಾಪಕ್ಕೆ ಹೆಚ್ಚು ಗೌರವ ಬರಬೇಕಾಗಿದ್ದರೆ, ಇದು ಒಳ್ಳೆಯದಲ್ಲ. ತಾವು ಕ್ಷಮೆ ಕೇಳಿದಿರಿ, ಅದು ದೊಡ್ಡತನ. ಇದರ ನಂತರ ತಾವೂ ನಾಯಕರು ಸ್ವಲ್ಪ ಅಧಿಕಾರಿ ವರ್ಗದವರಿಗೆ ಎಚ್ಚರಿಕೆ ಕೊಡಬೇಕೆಂದು ಕೋರುತ್ತೇನೆ. ವಸಂತ ಸಾಲಿಯಾನವರೇ ನಿಮ್ಮ ಭಾವನೆ ನನಗೆ ಅರ್ಥವಾಗುತ್ತದೆ, ಸರಳ ಪ್ರಶ್ನೆ ಅದು, ಸಮಯ ಕೇಳಿದ್ದಾರೆ, ಒಂದು ಸಲ ಸಹಕರಿಸೋಣ.

Karnataka Handloom Development Corporation

476 -Shri D.R. Patil (Gadag) : Will the Minister for Sugar, Textiles, Science & Technology, Environment & Ecology be pleased to state?

A) How many weavers KRDC has brought under its fold?

B) In the last 9 months, what is the quantity of yarn supplied by KRDC to weavers?

C) What are the problems faced by KRDC in providing a minimum of 25 days work to weavers in a month?

D) What steps Government has taken to overcome the above problems?

Sri P.C. Siddanagoudar (Minister of State for Sugar, Textiles, Science & Technology, Environment & Ecology) :

A) Eversince its inception, KRDC has covered 45,340 weavers under its folds, out of which 20,826 are working presently.

B) KRDC has distributed following quantites of yarn in the last 9 months:

Month	Quantity (in Kgs)	Value (Rs. in lakhs)
May 1995	1,32,716	223.00
June 1995	1,22,504	200.16
July 1995	2,00,586	308.34
August 1995	1,88,204	262.02
September 95	3,04,690	406.62

October 95	75,4941	51.80
November 95	1,51,459	217.53
December 95	2,17,393	281.53
January 1996	1,33,309	189.83
Total	15,26,355	2240.77

C)1)Progressive reduction in Janatha cloth production due to Government of India policy of phasing out Janatha cloth Scheme.

2) Not adequate diversification taken place at production level.

3) Discontinuation of Vidya Vikasa Scheme.

D) Education Department has been requested to continue the Vidya Vikas scheme. The quantity of production of Janatha cloth is decided in accordance with the policy of Govt. of India. The policy of Govt. of India is to reduce the Janatha Cloth production, K.R.D.C. has been requested to upgrade the skill and working them in production of other varieties of cloth.

ಶ್ರೀ ಪಿ.ಸಿ. ಸಿದ್ದನಗೌಡ : ಅಧ್ಯಕ್ಷರೇ, ಈಗಾಗಲೇ ಶಿಕ್ಷಣ ಇಲಾಖೆಗೆ ನಾವು ವಿನಂತಿ ಮಾಡಿದ್ದೇವೆ, ವಿದ್ಯಾವಿಕಾಸ ಯೋಜನೆಯನ್ನು ಈ ವರ್ಷ ಜಾರಿಗೊಳಿಸಿ ನಮ್ಮ KRDC ಯಿಂದಲೇ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಅದರ ಜೊತೆಗೆ ಸರ್ಕಾರ ಕೂಡ ನಿರ್ಣಯ ಮಾಡಿದೆ, ಕೆಎಸ್ಆರ್‌ಟಿಸಿ ಇರಬಹುದು, ಕೆಇಬಿ ಇರಬಹುದು ಅನೇಕ ಸರ್ಕಾರಿ ಸಂಸ್ಥೆಗಳೂ ಕೂಡ ನಮ್ಮ KRDC ಯಿಂದಲೇ ಒಟ್ಟಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದೇವೆ. ಜೊತೆಗೆ ನನ್ನ ಸಕ್ಕರೆ ಇಲಾಖೆ ಮತ್ತು ಬಿನ್ನಿಮಿಲ್ ನೌಕರರಿಗೂ ಆ ನಿಗಮದ ಬಟ್ಟೆ ಕೊಡಬೇಕೆಂದು ನಾನು ಸ್ವತಃ ಕೆಲವು ಕಡೆ ಹೋಗಿ ಕ್ರಮ ತೆಗೆದುಕೊಂಡಿದ್ದೇನೆ. ಶಿಕ್ಷಣ ಇಲಾಖೆಯಿಂದ ಪರವಾನಗಿ ಬಂದ ತಕ್ಷಣ ವಿದ್ಯಾವಿಕಾಸ ಯೋಜನೆ ಜಾರಿ ಮಾಡಿ ಹೆಚ್ಚಿನ ಕೆಲಸ ಕೊಡಲು ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಜಗದೀಶ ಶೆಟ್ಟರ್ : ಈ ವಿದ್ಯಾ ವಿಕಾಸ ಯೋಜನೆ ಬಗ್ಗೆ ಸರ್ಕಾರ ಯಾವಾಗ ಸ್ಪಷ್ಟವಾಗಿ ಆದೇಶ ಹೊರಡಿಸುತ್ತೀರೆಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಅಶೋಕ ಕಾಟವೆ : ನೇಕಾರರಿಗೆ ತಿಂಗಳಿಗೆ 25 ದಿವಸ ಕೆಲಸ ಕೊಡುತ್ತೀರಾ ಅಥವಾ ಇಲ್ಲವೇ ಎಂದು ಸ್ಪಷ್ಟವಾಗಿ ಹೇಳಿ.

ಶ್ರೀ ಪಿ.ಸಿ. ಸಿದ್ದನಗೌಡರ್ : ಅಧ್ಯಕ್ಷರೇ 25 ದಿವಸ ಕೊಡಬೇಕೆಂದು ನಾವು ನಿರ್ಣಯ ಮಾಡಿದ್ದೇವೆ. ಇದರ ಮಧ್ಯದಲ್ಲಿ ನೇಕರಾ ತಯಾರು ಮಾಡುವ ಬಟ್ಟೆಯನ್ನು ಜನತಾ ಧೋತಿ ಸೀರೆಯೆಂದು ಕೊಡುತ್ತೇವೆ. ಕೇಂದ್ರ ರಾಜ್ಯಸರ್ಕಾರಗಳ ನೆರವಿನಿಂದ ಹಸಿರು ಕಾರ್ಡಿನವರಿಗೆ ಕೊಡಬೇಕೆಂಬ ಯೋಜನೆ ಹಾಕಿಕೊಂಡಿದ್ದೇವೆ. ಕೇಂದ್ರ ಸರ್ಕಾರದ ನೀತಿ ನಿಯಮ ಏನಿದೆ ಆ ಪ್ರಕಾರ ನಾವು ನಡೆಯುತ್ತೇವೆ. ಇನ್ನೂ ನೀತಿ ಅಲ್ಲಿಂದ ಸರಿಯಾಗಿ ಬಂದಿಲ್ಲ. ಅದರಿಂದ ನೇಕರಾರಿಗೆ ಕೆಲಸ ಕೊಡಲಿಕ್ಕೆ ಆಗಿಲ್ಲ. ಎರಡನೆಯದಾಗಿ ಮಾನ್ಯ ಶಿಕ್ಷಣ ಸಚಿವರಿಗೆ ಈಗಾಗಲೇ ನಾನು ವಿನಂತಿ ಮಾಡಿದ್ದೇನೆ. ಸ್ವಲ್ಪ ದಿವಸದಲ್ಲೇ ಅವರು ನಿರ್ಣಯ ಮಾಡಿದ ತಕ್ಷಣ ವಿದ್ಯಾ ವಿಕಾಸ ಯೋಜನೆಯನ್ನು ಅಳವಡಿಸಿದರೆ ನೇಕಾರರಿಗೆ 25 ದಿವಸ ಕೆಲಸ ಕೊಡಬಹುದು.